# ಡೀಸೆಂಟ್ ಕಳ್ಳರು

■ ಸುಶೀಲಾ ಆರ್.ರಾವ್



ಕಳ್ಳತನ ಮಾಡುವವರೆಲ್ಲ ಕಳ್ಳರೇ ಸರಿ. ಅದರಲ್ಲಿ 'ಡೀಸೆಂಟ್ ಕಳ್ಳರು' ಎಂದರೆ ಯಾರು? ಹಾಗೊಂದು ವಿಭಾಗವಿದೆಯೇ? ಎಂದು ಹುಬ್ಬೇರಿಸದಿರಿ. ಯಾವುದೇ ಭಯಂಕರ ದುಷ್ಪರಿಣಾಮಗಳಿಲ್ಲದೆ, ಸರಳತೆ, ನವಿರುಗಾರಿಕೆಗಳೊಂದಿಗೆ ಕೆಲವೊಮ್ಮೆ ಸ್ವಂತಿಕೆ, ಸೌಜನ್ಯಗಳನ್ನು ಪ್ರದರ್ಶಿಸುವ ಕಳ್ಳರು 'ಡೀಸೆಂಟ್ ಕಳ್ಳರು' ಎಂಬ ಬಿರುದಿಗೆ ಅರ್ಹರಾಗುತ್ತಾರೆ. ಪೋಷಾಕು, ಹಾವಭಾವಗಳು ಎಲ್ಲಾ ಕಳ್ಳರಲ್ಲೂ ಈಗೀಗ ಡೀಸೆಂಟ್ ಆಗಿದ್ದರೆ, ಡೀಸೆಂಟ್ ಕಳ್ಳರೆಂಬವರ ಚೋರತನದಲ್ಲೂ ಅತಿ ನಾಜೂಕುತನವೇ!

ಈ 'ಡೀಸೆಂಟ್ ಕಳ್ಳರು' ಎಂಬ ಶಬ್ದವನ್ನು ನಾನು ಕೇಳಿದ್ದು ಮತ್ತು ಅದು ಅನ್ವರ್ಥ ಪದ ಪ್ರಯೋಗವೇ– ಎಂದು ಅನ್ನಿಸಿದ್ದು ನನ್ನ ಹತ್ತಿರ ಬಂಧುವೊಬ್ಬರಿಂದ, ಅವರ ಅನುಭವ ಕಥನ ಕೇಳಿದ ಬಳಿಕ.

ಆ ಬಂಧುಗಳ ಮನೆಯಲ್ಲಿ ಒಮ್ಮೆ ಕಳ್ಳತನವಾಯಿತು. ಆ ಪ್ರದೇಶದಲ್ಲಿನ ಮನೆಗಳು ಪರಸ್ಪರ ದೂರದಲ್ಲಿದ್ದವು. ಇವರದೂ ಒಂಟಿ ಮನೆಯೇ, ಎದುರಿಗೆ ವಿಸ್ತಾರವಾದ ಬಯಲು ಪ್ರದೇಶ ಬೇರೆ. ಮನೆಯಲ್ಲಿ ಹಗಲೇ ಯಾರೂ ಇಲ್ಲ ಎಂದು ಕಳ್ಳರು ಗಮನಿಸಿಕೊಂಡಿರಬೇಕು. ರಾತ್ರಿ ಮನೆಯ ಹಿಂಭಾಗದ ಗಾಜಿನ ಕಿಟಕಿ ಒಡೆದು ಕೈಯೋ ಕೋಲೋ ಒಳ ತೂರಿಸಿ ಬಾಗಿಲಿನ ಚಿಲಕ ತೆಗೆದು ಮನೆಯ ಒಳ ಹೊಕ್ಕಿದ್ದರು ಕಳ್ಳರು. ಅಲ್ಲಿ ಹಣ, ಅಮೂಲ್ಯವಾದ ಒಡವೆಗಳು ಯಾವೂವೂ ಸಿಗಲಿಲ್ಲ. ಎಲ್ಲವೂ ಗೋದ್ರೇಜ್ ಕಪಾಟಿನ ವಶದಲ್ಲಿದ್ದು ಬೀಗದ ಕೈಯೂ ಲಭ್ಯವಾಗಲಿಲ್ಲ. ಆದರೆ ಮನೆಯವರು ಹೊರಹೋಗುವ ಆತುರ ದಲ್ಲಿ, ದೇವರ ಮಂಟಪದ ಮುಂದಿದ್ದ ಎರಡು ಬೆಳ್ಳಿಯ ಕಾವಿ ದೀಪಗಳನ್ನು ಹಾಗೆಯೇ ಬಿಟ್ಟಿದ್ದರು! ಸರಿ, ಕಳ್ಳರು ಅದನ್ನು ಖುಷಿ ಖುಷಿಯಾಗಿ ಅಪಹರಿಸಿದರು.

ಸ್ವಾರಸ್ಯ ಮುಂದಿನ ಭಾಗದಲ್ಲಿದೆ! ಕಳ್ಳರಿಗೆ ಹಸಿವು, ಬಾಯಾರಿಕೆಗಳ ಪೀಡೆ ಕಾಡಿದೆ. ಫ್ರಿಜ್ಜಿನ ಬಾಗಿಲು ತೆರೆದವರಿಗೆ ಹಾಲಿನ ಪಾತ್ರೆಯು ಸುಸ್ವಾಗತ ನೀಡಿದೆ. ಬೇರೊಂದು ಪಾತ್ರೆಗೆ ಎರಡೇ ಎರಡು ಗ್ಲಾಸ್ ಹಾಲು ಬಗ್ಗಿಸಿಕೊಂಡು ಬಿಸಿ ಬಿಸಿಯಾಗಿ ಹಾರ್ಲಿಕ್ಸ್ ಮಾಡಿಕೊಂಡು ಕುಡಿದಿದ್ದರು. ಕಪಾಟಿನಲ್ಲಿದ್ದ ಚಿಪ್ಸ್ ಮತ್ತು ಬಿಸ್ಕತ್ ಹಸಿವನ್ನು ತಣಿಸಿವೆ. ಸಂತೃಪ್ತರಾದ ಕಳ್ಳರು ಎರಡು ಎಂಜಲು ಗ್ಲಾಸ್ ಮತ್ತು ಪಾತ್ರೆ, ತಟ್ಟೆಗಳನ್ನೆಲ್ಲ ತೊಳೆದು ಡೈನಿಂಗ್ ಟೇಬಲ್ಲಿನ ಮೇಲೆ ಕವುಚಿ ಹಾಕಿದ್ದರು. ಕಪಾಟಿನಲ್ಲಿದ್ದ ಹಾರ್ಲಿಕ್ಸ್ ಬಾಟ್ಲಿ ಮತ್ತು ತಿಂಡಿ ಡಬ್ಬಗಳು ಸ್ಥಳಾಂತರಗೊಂಡು ತಾವೂ ಟೇಬಲ್ಲಿನ ಮೇಲೆ ನೇರವಾಗಿ ಕುಳಿದಿದ್ದವು ಒಳಗಿದ್ದನ್ನು ಸ್ವಾಹಾ ಮಾಡಿದ್ದಕ್ಕೆ ಮೂಕ ಸಾಕ್ಷಿ ತೋರಿಸುತ್ತ!

ಮರುದಿನ ಮಧ್ಯಾಹ್ನ ಮನೆಯವರಿಗೆ ಬೆಳ್ಳಿದೀಪಗಳ ಕಣ್ಮರೆಯೊಂದಿಗೆ ಕಳ್ಳರ ಸ್ವಾಹಾ ಕೆಲಸವೂ ಗಮನಕ್ಕೆ ಬಂದಿತ್ತು! ತಮ್ಮಂಥ ಕಳ್ಳರ ಎಂಜಲು ಗ್ಲಾಸ್ ತೊಳೆಯುವ ರಗಳೆದಾತರಿಗೆ ಬೇಡವೆಂದು ಕ್ಲೀನ್ ಮಾಡಿ ಇಟ್ಟಿದ್ದ ಕಳ್ಳರ ಮನೋಭಾವ ವಿಶಾಲವಲ್ಲವೆ? ಸಖೇದಾಶ್ಚರ್ಯ, ಮೆಚ್ಚುಗೆ ಸಹಿತ ಯಜಮಾನರು ತಟ್ಟನೆ 'ಡೀಸೆಂಟ್ ಕಳ್ಳರೇ ಇವರು!' ಎಂದು ಉದ್ಗರಿಸಿದರು.

ಈ ಬಗೆಯ ಡೀಸೆಂಟ್ ಕಳ್ಳರಿಗೆ ಪ್ರತ್ಯೇಕ ಸ್ಥಾನಮಾನ ಸಲ್ಲಬೇಕಲ್ಲವೆ? ಆದರೆ ಈ ಸ್ವದೇಶೀ ಕಳ್ಳರಿಗೆ ವಿದೇಶೀ ಕಥೆಗಳಲ್ಲಿರುವಂತೆ 'ಥ್ಯಾಂಕ್ಸ್' ಎಂದೋ 'ಹಣದ ಅತಿ ಅಗತ್ಯಕ್ಕಾಗಿ ಕಳ್ಳತನ ಮಾಡಬೇಕಾಯಿತು, ಕ್ಷಮಿಸಿ.. ಆಮೇಲೆ ಹಿಂತಿರುಗಿಸುತ್ತೇವೆ' ಎಂದೋ ಬರೆದಿಡಲು ತೋಚಲಿಲ್ಲವೋ ಏನೋ. ಅಥವಾ ಸೌಜನ್ಯದ ಕೊರತೆಯೋ? ಯಾರಿಗೊತ್ತು?

ಇನ್ನೊಂದು ಹಗಲಿನಲ್ಲಿ ನಡೆದ ಡೀಸೆಂಟ್ ಕಳ್ಳತನ. ನನ್ನ ಗೆಳತಿ ಹೇಳಿದ ಸ್ವಾನುಭವ ಪ್ರಸಂಗವಿದು. ಅವರ ಮನೆಯಲ್ಲಿ ದಂಪತಿಗಳಿಬ್ಬರೂ ಉದ್ಯೋಗಿಗಳು. ಮಕ್ಕಳಿಬ್ಬರಿಗೆ ಕಾಲೇಜು. ರಜಾದಿನಗಳ ಹೊರತು, ಹಗಲಿನಲ್ಲಿ ಸದಾ ಮುಚ್ಚಿಕೊಂಡಿರುವ ಮುಂಬಾಗಿಲು ಮತ್ತು ಗೇಟುಗಳು. ತೋಟದಲ್ಲಿನ ಹೂ ಗಿಡಗಳು ಮತ್ತು ನಾಲ್ಕಾರು ಗುಲಾಬಿ ಸಸಿಗಳು ಪುಷ್ಪಿತವಾಗಿ ತೊನೆಯುತ್ತ ವಾತಾವರಣಕ್ಕೆ ಸದಾ ರಂಗು ನೀಡುತ್ತಿದ್ದವು. ಅದೊಂದು ದಿನ ಬೆಳಿಗ್ಗೆ ಹತ್ತು ಗಂಟೆಯ ಸಮಯ. ಗೆಳತಿ ಅಂದು ರಜೆ ಹಾಕಿದ್ದಳು. ಹೊರಗಿನ ಕೆಲಸಕ್ಕೆ ಇನ್ನೇನು ಹೊರಡಬೇಕು ಅನ್ನುವಷ್ಟರಲ್ಲಿ ಮನೆ ಗೇಟ್ 'ಟಂಗ್' ಎಂಬ ಗಟ್ಟಿ ಸದ್ದಿನೊಂದಿಗೆ ತೆರೆದುಕೊಂಡಿತು. ಅದು ಟೂ–ಇನ್–ವನ್' ಗೇಟು, ಕಾಲಿಂಗ್ ಬೆಲ್ಲಿನ ಕೆಲಸವನ್ನೂ ವಹಿಸಿಕೊಳ್ಳುತ್ತದೆ! ಈಕೆ ಕಿಟಕಿಯಿಂದ ಹೊರಗೆ ಇಣುಕುತ್ತಲೇ ನಿಬ್ಬೆರಗಿನ ಮೂರ್ತಿಯಾದಳು.

ಅಲ್ಲಿ ಅಂಗಳದಲ್ಲಿ ನವಿರು ಕಳ್ಳತನವೊಂದು ಪ್ರಾರಂಭವಾಗಿ ಬಿಟ್ಟಿತ್ತು! ಅತ್ಯಂತ ಸಂಭಾವಿತೆ, ಸರಳ ಜೀವಿ ಎಂದು ತಾನು ದೃಢ ನಂಬಿದ್ದ, ನಾಲ್ಕು ಮನೆಗಳಾಚೆಯ ಪರಿಚಿತ ಗೃಹಿಣಿ, ಸರಾಗ ಚೆಂಗುಲಾಬಿ ಹೂಗಳನ್ನು ಕೊಯ್ಯ ತೊಡಗಿದ್ದಳು. ಒಂದೊಂದಾಗಿ ಒಂದು..ಎರಡು..ಮೂರು.. ನಾಲ್ಕು ಯಾವ ಅಳುಕು ಇಲ್ಲ, ಬಳುಕು ಮೊದಲೇ ಇಲ್ಲ! ಇವಳಿಗೆ ಸಹಿಸಲಾಗಲಿಲ್ಲ. ತಟ್ಟನೆ ಮುಂಬಾಗಿಲು ತೆರೆಯುತ್ತಾ 'ಯಾರದು?' ಎಂದು ಪ್ರಶ್ನೆ ಎಸೆದಳು ಗಟ್ಟಿಯಾಗಿ.

ನೆರೆಯಾಕೆ ಬೆಚ್ಚಿ ಬಿದ್ದಳು.

'ನೀವು... ನೀವು.. ಇದ್ದೀರಾ?...'

ಪರಿಚಯದ ನೆರೆಹೊರೆಯವರಲ್ಲಿ ನಿಷ್ಠುರ ಮಾಡಲಾದೀತೆ? ಆದರೂ ಒಂದಿಷ್ಟೇ ಇಷ್ಟಾದರೂ 'ಬುಸ್' ಎನ್ನದಿದ್ದರೆ ಹೇಗೆ?

ಮನೆಯಾಕೆ ನಸುನಕ್ಕಳು.. 'ಹೌದು ಇನ್ನೂ ಇದ್ದೇನೆ.. ಇವತ್ತು ಲೀವ್ ಹಾಕಿದ್ದೆ ಅಷ್ಟೇ... ಹೊರಗೆ ಕೆಲಸವಿತ್ತು... ನೀವೇನು ಬಂದದ್ದು? ಭಾರೀ ಅಪರೂಪ?'

ಕೈಯಲ್ಲಿನ ನೇರ ಸಾಕ್ಷಿ ಗುಲಾಬಿ ಹೂಗಳು ಕೈಗೆ ಚುಚ್ಚುತ್ತಿವೆ, ಮನಸಾಕ್ಷಿ? ಹೇಗೋ? ಬಂದಾಕೆ ಸಾವರಿಸಿಕೊಂಡಳು.

'ಏನಿಲ್ಲ... ಇಲ್ಲೇ ದೇವಸ್ಥಾನಕ್ಕೆ ಹೊರಟಿದ್ದೆ... ಹಾಗೇ ಅಲ್ಲಿ ಕೊಡಲು ಹೂ ಕೊಯ್ದಿದ್ದೆ... ತಗೊಳ್ಳಿ ನೀವಿದ್ದೀರಲ್ಲಾ?'

ಮನೆಯಾಕೆ... 'ಬೇಡಪ್ಪಾ.. ಕೊಯ್ದದ್ದು ನೀವಲ್ವಾ? ನೀವೇ ದೇವಸ್ಥಾನಕ್ಕೆ